

ಇದು ನಾನಾ ಬಗೆಯ ಧಗೆಗಳ ಕಾಲ. ಒಂದೆಡೆ, ಬೇಸಿಗೆಯ ಸುಡುಬಿಸಿಲು, ಬರದ ಬೇಗೆ. ಇನ್ನೊಂದೆಡೆ, ಗಡಿಯಲ್ಲಿ ಸಂಘರ್ಷದ ಬಿಸಿ, ನಾಡಿಗೂ ತಟ್ಟಿದೆ ಆದರ ಕಾವು. ಇವುಗಳ ಜೊತೆಗೆ ಕಾಡಿನೊಳಗೂ ಬೆಂಕಿ! ಬಂಡೀಪುರದ ಕಾಡಿಗೆ ಬಿದ್ದ ಬೆಂಕಿ ಸಾವಿರಾರು ಹೆಕ್ಟೇರ್ ಕಾಡನ್ನು ಆಪೋಶನ ತೆಗೆದುಕೊಂಡಿದೆ. ಬೇಸಿಗೆಯ ಬಿಸಿಲು, ಯುದ್ಧದ ಧಗೆ – ಇವುಗಳ ಲಗಾಮು ಜನಸಾಮಾನ್ಯರ ಲೆಕ್ಕಾಚಾರಗಳನ್ನು ಮೀರಿದ್ದು. ಆದರೆ, ಕಾಡಿನ ಬೆಂಕಿಯಲ್ಲಿ ನಮ್ಮದೇ ಮುಖಗಳು–ಕೈಗಳು ಕಾಣಿಸುತ್ತವೆ. ಕಾಳ್ಗಿಚ್ಚಿನ ಸ್ವರೂಪ ಹಾಗೂ ಕಾರಣಗಳು ಹಾಗೂ ವಿಶ್ಲೇಷಣೆಯ ಪ್ರಯತ್ನ ಈ ವಾರದ ಸುಧಾ ವಿಶೇಷ.